## ಪ್ರಕೃತಿಯಲ್ಲರಳಿದ ಚಿಕ್ಕಮಗಳು

ಪ್ರಕೃತಿ ಸೌಂದರ್ಯವೇ ಮೈವೆತ್ತಿ ನಿಂತಿರುವ ಚಿಕ್ಕಮಗಳೂರಿನ ಹೊರವಲಯದಲ್ಲಿರುವ 'ಸಿರಿ ಕಾಫಿ ಹೌಸ್' ಪಕ್ಕದಲ್ಲಿ ಚಿಕ್ಕಮಗಳೊಬ್ಬಳು ದಾರಿ ಹೋಕರನ್ನು ಕೈ ಬೀಸಿ ಕರೆಯುತ್ತಿದ್ದಾಳೆ.

ಈ ಚಿಕ್ಕಮಗಳನ್ನು ಕಲ್ಲಿನಿಂದ ಕೆತ್ತಿದ ಶಿಲ್ಪಿಯು ಅವಳ ಸೀರೆ, ಸರ, ಬಳೆ, ಓಲೆ ಎಲ್ಲವನ್ನೂ ಪ್ರಕೃತಿಯಲ್ಲಿ ದೊರೆಯುವ ಹುಲ್ಲು, ಹೂವು, ಪುಟ್ಟ ಗಿಡ ಮತ್ತು ಎಲೆಗಳಿಂದ ಅಲಂಕರಿಸಿರುವುದು ವಿಶೇಷ. ಸುಂದರ ಪರಿಸರದಲ್ಲಿರುವ ಈ ವನರಾಣಿಯ ಮುಂದಿರುವ ಕೊಳ ಇನ್ನೂ ಆಕರ್ಷಣೀಯ. ಇವಳ ಪಕ್ಕದಲ್ಲಿಯೇ ಚೆಲುವನ್ನು ಬಣ್ಣಿಸಿರುವ ಶಿಲಾ ಫಲಕವೂ ಇದೆ. ಕಾಳಿದಾಸನ ಶಾಕುಂತಲೆಯನ್ನು ನೆನಪಿಸುವಂತೆ ಕೆತ್ತಿರುವ ಶಿಲ್ಪಿಯ ಕೈಚಳಕಕ್ಕೆ ಮತ್ತು ಅಲಂಕರಿಸಿರುವ ರೀತಿಗೆ ತಲೆದೂಗಲೇಬೇಕು.

**-ವಾರಿಜಾ ಜಗದೀಶ್, ಶಿವಮೊಗ್ಗ**





## ಚೌಡೇಶ್ವರಿ ರಥ

ಉತ್ತರ ಕನ್ನಡ ಜಿಲ್ಲೆಯ ಉಜ್ಜಿನಿ ಗ್ರಾಮದ ಗ್ರಾಮದೇವತೆ ಚೌಡೇಶ್ವರಿಯ ಆಕರ್ಷಕ ರಥವಿದು. ಕಗ್ಗಲ್ಲಿನಿಂದ ತಯಾರಿಸಿದ ಚಕ್ರವು ನೋಡುಗರನ್ನು ತನ್ನತ್ತ ಸೆಳೆಯುತ್ತದೆ. ಇಂತಹ ಅಪೂರ್ವ ರಥವು ಇಂದು ದುಃಸ್ಥಿತಿಯಲ್ಲಿದೆ.

**-ಶ್ಯಾಮಪ್ರಸಾದ ಸರಳಿ, ಕೇರಳ**

**ಚಿತ್ರ : ರವಿರಾಜ ಪನೆಯಾಲ**

## ಏಕಶಿಲಾ ಸ್ತಂಭ

ಈ ಆಕರ್ಷಕ ಸ್ತಂಭವನ್ನು ಒಂದೇ ಕಲ್ಲಿನಿಂದ ಕೆತ್ತಲಾಗಿದೆ. ಸುಮಾರು 15 ಅಡಿ ಎತ್ತರ ಇರುವ ಈ ಕಂಬದಲ್ಲಿ ವಿವಿಧ ಬಗೆಯ ಆಕರ್ಷಕ ಕೆತ್ತನೆಗಳನ್ನು ಕಾಣಬಹುದು. ಕಂಬದ ಕೊನೆಯಲ್ಲಿ ಗುಮ್ಮಟವನ್ನು ಹೋಲುವ ಕೆತ್ತನೆ ಇದೆ. ಈ ಕೆತ್ತನೆಯ ಕಂಬ ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಮಿರ್ಜಾನ ಕೋಟೆಯ ಪ್ರವೇಶ ದ್ವಾರದಲ್ಲಿದೆ.

**-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

